**<u>2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು</u>**

**<u>ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ</u>.**

**ದಿಃ 10.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ವಿ ಜಿ ವಕೀಲರಿಂದಃ**

ದಾವಾದಲ್ಲಿ ನಮೂದು ಇದ್ದಂತಹ ಆಸ್ತಿ ಯಾರದು ಎಂಬ ಬಗ್ಗೆ ನೀವು ಮಾಹಿಡಿ ಪಡೆದುಕೊಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ಆಸ್ತಿ ಮೋಹನ ಶಾ ರವರದ್ದು ಎಂದರೆ ಹೂ ಎನ್ನುತ್ತಾರೆ. ಸದರಿಯವರು ಮರಣ ಹೊಂದಿದ ನಂತರ ಅವರ ಹೆಂಡತಿ ಮತ್ತು ಮಕ್ಕಳು ಸದರಿ ಆಸ್ತಿಗೆ ಮಾಲೀಕರು ಇರುತ್ತಾರೆ ಎಂದರೆ ಸರಿ. ನಾನು ಹೇಳುವಂತಹ ದಾಖಲಗೆ ಸದರಿ ಮೋಹನ ಶಾ ಇವರ ವಾರಸುದಾರರು ಯಾರು ಸಹಿ ಮಾಡಿಲ್ಲ ಎಂದರೆ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ನೀಡಿದ ಸಾಲದ ಹಣ ನನಗೆ ವಾಪಸ್ಸು ಬಂದರೂ ಕೂಡ ಪ್ರತಿವಾದಿಯರ ನಾನು ಸುಳ್ಳು ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಕಿರುಕುಳ ಕೊಟ್ಟರೆ ಸ್ವಲ್ಪ ಹಣ ಸಿಗುತ್ತದೆ ಎನ್ನುವ ಕಾರಣಕ್ಕೆ ನಾನು ಈ ಖೊಟ್ಟಿ ಕೇಸು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**(ಪ್ರತಿವಾದಿ 1(ಎ) (ಸಿ) ಮತ್ತು 2 ರವರ ಪರ ವಕೀಲರಿಂದ ಪ್ರತಿವಾದಿ 1 (ಬಿ), 3 ಮತ್ತು 4 (ಎ) ಮತ್ತು (ಬಿ) ರವರ ಪರ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಕೋರಿದ್ದು ಅವರ ಮನವಿಯನ್ನು ಪುರಸ್ಕರಿಸಿ ಸದರಿ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲಾಯಿತು)**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**